ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1034
ಸದಸ್ಯರ ಹೆಸರು	ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	22.12.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿರುವ ಆದಿವಾಸಿ ಜನಾಂಗದ ಅನೇಕ ಕುಟುಂಬಗಳಿಗೆ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳು ಹೊಂದದಿರುವುದರಿಂದ ಸರ್ಕಾರದ ಬಹುತೇಕ ಸವಲತ್ತುಗಳಿಂದ ಅವರುಗಳು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಈ ಆದಿವಾಸಿ ಜನರಿಗೆ ಈ ಅವಶ್ಯಕ ದಾಖಲೆಗಳನ್ನು ಮಾಡಿಕೊಡಲು ಸರ್ಕಾರದ ಕ್ರಮಗಳೇನು; ಹಾಗೂ ದಾಖಲೆಗಳನ್ನು ಮಾಡಿಕೊಡಲು ಜಿಲ್ಲಾಮಟ್ಟ / ತಾಲ್ಲೂಕು ಮಟ್ಟದ ಅಧಿಕಾರಿಗಳು ಆದಿವಾಸಿ ಹಾಡಿಗಳಿಗೆ ಭೇಟಿ ನೀಡಿ ವಿವರ ಪಡೆದು ಆದಾಲತ್‌ಗಳನ್ನು ನಡೆಸಿ ದಾಖಲೆಗಳನ್ನು ಮಾಡಿಕೊಡಲು ಇರುವ ತೊಡಕುಗಳೇನು; (ವಿವರ ನೀಡುವುದು)	ಈ ಕುಟುಂಬಗಳಿಗೆ ಆಧಾರ್ ಕಾರ್ಡ್ ನೀಡಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಆದಿವಾಸಿ ಕುಟುಂಬಗಳು ವಾಸಿಸುತ್ತಿರುವ ಸ್ಥಳಗಳಲ್ಲಿ ವಿಶೇಷ ಆಧಾರ್ ಕ್ಯಾಂಪ್‌ಗಳನ್ನು ಹಮ್ಮಿಕೊಳ್ಳಲಾಗುವುದು. ಮತದಾರರ ಗುರುತಿನ ಚೀಟಿ ನೀಡಲು BLO (Booth Lever Officers) ಗಳ ಮೂಲಕ Special Summary Revision ನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಪಡಿತರ ಚೀಟಿ ನೋಂದಣಿಗೆ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗುವುದು. ಆಧಾರ್‌ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಹೊಂದದಿರುವ ಕೊಡಗು ಜಿಲ್ಲೆಯ ಆದಿವಾಸಿ ಕುಟುಂಬದ ಸದಸ್ಯರುಗಳಿಗೆ ಈ ದಾಖಲೆಗಳನ್ನು ಒದಗಿಸಲು ವಿಶೇಷ ಅದಾಲತ್‌ಗಳನ್ನು ತಾಲ್ಲೂಕು ತಹಶೀಲ್ದಾರರ ನೇತೃತ್ವದಲ್ಲಿ ಏರ್ಪಡಿಸಿ ITDP (Integrated Tribal Development Programme) ಅಧಿಕಾರಿಗಳು ಹಾಗೂ ಇತರೆ ಸಂಬಂಧಿಸಿದ ಅಧಿಕಾರಿಗಳು ಎನ್.ಜಿ.ಓ. ಗಳೊಂದಿಗೆ ಸೇರಿ ಕ್ರಮ ಕೈಗೊಳ್ಳಲಾಗುತ್ತಿದೆ.

೨)	ಈ ಕಂದಾಯ ಸೇವೆಯ ಆದಾಲತ್ ಗಳನ್ನು ಯಾವ ಕಾಲಮಿತಿಯಲ್ಲಿ ಮಾಡಲಾಗುವುದು? (ಮಾಹಿತಿ ನೀಡುವುದು)	ಈ ಸೌಲಭ್ಯವನ್ನು ಮೂರು ತಿಂಗಳ ಒಳಗಾಗಿ ನೀಡಲು ಜಿಲ್ಲಾಡಳಿತವು ಕಾರ್ಯಕ್ರಮ ರೂಪಿಸಿದೆ.

ಸಂಖ್ಯೆ: ಕಂಇ 74 ಎಜಿಎಸ್ 2021

(ಆರ್.ಅಶೋಕ)

ಕಂದಾಯ ಸಚಿವರು